**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No.**185/2020

**PW.** 2

**CW.** 2

**ಸಾಕ್ಷಿಯ ಹೆಸರು – ಮಂಜುನಾಥ**

**ತಂದೆಯ ಹೆಸರು – ಲೇ ಮೋಟಯ್ಯ**

**ವಯಸ್ಸು – 47 ವರ್ಷಗಳು** ದಿನಾಂಕ **23.12.2024** ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ – ಕೂಲಿ ಕೆಲಸ**

**ವಾಸಸ್ಥಳ – ಚಾಮಲಾಪುರ, ಹೆಚ್.ಡಿ. ಕೋಟೆ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಮೃತ ದಾಸಶೆಟ್ಟಿ ನನಗೆ ಗೊತ್ತು. ಈಗ್ಗೆ 8 ವರ್ಷಗಳ ಹಿಂದೆ ಮೃತ ದಾಸಶೆಟ್ಟಿ ಅವರ ಮನೆಯ ಹಿಂದೆ ವಿಷ ಕುಡಿದು, ಒದ್ದಾಡುತ್ತಿದ್ದಾರೆ ಎಂದು ಅವರ ಹೆಂಡತಿ ನನಗೆ ಹೇಳಿದರು. ನಾನು ಕೂಡಲೇ ಹೋಗಿ ನೋಡಲಾಗಿ, ದಾಸಶೆಟ್ಟಿಗೆ ಪ್ರಜ್ಞೆ ಇರಲ್ಲಿಲ. ನಾನು ಮತ್ತು ಚಾಸಾ 11 ರವರು ಆ್ಯಂಬುಲೆನ್ಸ್‌ಗೆ ಕರೆ ಮಾಡಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕರೆದುಕೊಂಡು ಹೋದೇವು. 4 ದಿನಗಳ ನಂತರ ದಾಸಶೆಟ್ಟಿ ಆಸ್ಪತ್ರೆಯಲ್ಲಿ ಮೃತಪಟ್ಟರು. ದಾಸಶೆಟ್ಟಿಯ ಶವದ ಅಂತ್ಯಸಂಸ್ಕಾರ ಮುಗಿದ ನಂತರ ಪೊಲೀಸರು ಚಾಸಾ 1 ರವರ ಮನೆಯ ಬಳಿ ಬಂದಾಗ ನಾನು ಸ್ಥಳ ತೋರಿಸಿದ್ದೇನೆ. ಪೊಲೀಸರು ಸ್ಥಳದಲ್ಲಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು. ಪಂಚನಾಮೆ ಕಾಲಕ್ಕೆ ರಾಮಶೆಟ್ಟಿ ಇದ್ದರು, ಮತ್ತೆ ಬೇರೆ ಯಾರು ಇದ್ದರು ಎಂದು ನನಗೆ ನೆನಪಿಲ್ಲ. ಆರೋಪಿತರರಿಗೂ ದಾಸಶೆಟ್ಟಿಗೂ ಗಲಾಟೆಯಾಗಿ ದಾಸಶೆಟ್ಟಿ ವಿಷ ಸೇವನೆ ಮಾಡಿ ಆತ್ಮಹತ್ಯೆ ಮಾಡಿಕೊಂಡರು. ಈಗ ಸದರಿ ಪಂಚನಾಮೆಯನ್ನು ನಿ.ಪಿ.2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು.

**SC No.185/2020**
**PW.2**

**ಪಾಟೀಸವಾಲುಃ- ಆರೋಪಿ ಪರ ಶ್ರೀ ಕೆ.ಸಿ.ಬಿ ವಕೀಲರಿಂದಃ-**

ಆರೋಪಿತರರಿಗೂ ದಾಸಶೆಟ್ಟಿ ಮನೆಯವರಿಗೂ ದಿಃ 27.04.2016 ರಂದು ಪೊಲೀಸರು ಬಂದು ಪಂಚನಾಮೆ ಮಾಡಿದರು. ಪೊಲೀಸರು ಪಂಚನಾಮೆಯಲ್ಲಿ ಏನು ಬರೆದುಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪಂಚನಾಮೆ ಬರೆದ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತಿಲ್ಲ ಎಂದರೆ ಸರಿ. ಪಂಚನಾಮೆಗೆ ಯಾರ್ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರಿಗೆ ನಾನು ಸ್ಥಳವನ್ನು ತೋರಿಸಿಲ್ಲ. ನನ್ನ ಸಮಕ್ಷಮ ಪೊಲೀಸರು ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಬೇರೆಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.